# ಕಳಪೆ ಕಲಾಪ, ಹೊರಟ್ಟಿ ಅಸಮಾಧಾನ

**ಶಿವಮೊಗ್ಗ:** ಮೇಲ್ಮನೆಯಲ್ಲಿನ ಕಲಾಪಗಳು ಸಭಾಪತಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಹೋಗುವಷ್ಟು ಬೇಸರ ಮೂಡಿಸಿವೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಬೇಸರದಿಂದ ಹೇಳಿದರು.



ಸೊರಬದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ಈ ಬಾರಿಯ ಬೆಳಗಾವಿ ಅಧಿವೇಶನ ತೀವ್ರ ಬೇಸರ ಮೂಡಿಸಿತು. ಮೇಲ್ಮನೆ ಬೇರೆಯವರಿಗೆ ಮಾದರಿಯಾಗಿರಬೇಕು. ವಿಚಾರಗಳನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಯಾರೂ ಮಾಡಲಿಲ್ಲ,'' ಎಂದು ಬೇಸರದಿಂದ ನುಡಿದರು.

'ಹಿಂದೆ ಬಂಗಾರಪ್ಪ, ಖಾದ್ರಿ ಶಾಮಣ್ಣ, ಮಲ್ಲಿಕಾರ್ಜುನ ಮನ್ಸೂರ್, ಗಂಗೂಬಾಯಿ ಹಾನಗಲ್ ಅಂಥವರು ಪಾಲ್ಗೊಳ್ಳುವಿಕೆಯಿಂದ ಅಧಿವೇಶನ ಬಹಳ ನೀಟಾಗಿ ನಡೆಯುತ್ತಿತ್ತು. ಸಿನಿಮಾ ನಟರು, ರಾಜಕಾರಣಿಗಳು, ಪತ್ರಕರ್ತರು, ಸಾಹಿತಿಗಳೂ ಬರುತ್ತಿದ್ದರು. ಈಗ ಇಡೀ ವ್ಯವಸ್ಥೆಯೆ ಹಾಳಾಗಿದೆ,'' ಎಂದು ಬೇಸರಿಸಿದರು.

# ಸಭಾಪತಿ ಸ್ಥಾನಕ್ಕೆ ರಾಜೀನಾಮೆಯೇ ಲೇಸು

ಶಿವಮೊಗ್ಗ: ವಿಧಾನ ಪರಿಷತ್ ಅಧಿವೇಶನಗಳು ಅರ್ಥ ಕಳೆದುಕೊಳ್ಳುತ್ತಿದ್ದು ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡಿ ಹೋಗುವಷ್ಟು ಬೇಸರ ತರಿಸುತ್ತಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ಅಸಮಾಧಾನ ವ್ಯಕ್ತಪಡಿಸಿದರು. ಸೊರಬದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದೆ ನಡೆಯುತ್ತಿದ್ದ ಅಧಿವೇಶನಗಳು ಅರ್ಥಗರ್ಭಿತವಾಗಿರುತ್ತಿದ್ದವು. ಸದನದಲ್ಲಿ ಪಾಲ್ಗೊಂಡು ಚರ್ಚಿಸಿ ಜನರ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಕೆಲಸ ಆಗುತ್ತಿತ್ತು. ಆದರೆ ಈಗ ಸಭಾಪತಿಗೆ ಗೌರವವೇ ಇಲ್ಲ ಎಂದರು. ಶಾಸನ ಸಭೆಗಳು ವಿಷಯಾಧಾರಿತವಾಗಿ ನಡೆಯುತ್ತಿಲ್ಲ. ಅವರು ಇವರನ್ನು ಬೈಯ್ಯುವುದು, ಇವರು ಅವರನ್ನು ತೆಗಳುವುದೇ ಆಗುತ್ತಿದೆ. ಬರಬರುತ್ತ ಸದನದೊಳಗೆ ಚರ್ಚೆಗಳು ಕಳಪೆ ಆಗುತ್ತಿವೆ. ನಾನು ಕೂಡ ಇದನ್ನು ಸರಿಪಡಿಸಲು ಸಾಕಷ್ಟು ಪ್ರಯತ್ನ ಮಾಡಿದ್ದೇನೆ. ಆದರೆ ಆ ಎಲ್ಲ ಪ್ರಯತ್ನಗಳು ಫಲಕಾರಿಯಾಗಲಿಲ್ಲ. ಈ ಬಗ್ಗೆ ನನಗೂ ಬೇಸರ ಇದೆ. ರಾಜೀನಾಮೆ ಕೊಟ್ಟು ಹೋಗುವುದೇ ಒಳ್ಳೆಯದೆಂದು ಒಂದು ಬಾರಿ ಹೇಳಿದ್ದೆ ಎಂದರು.

ಹಿಂದೆಲ್ಲ ಅಧಿವೇಶನ ಅರ್ಥಪೂರ್ಣವಾಗಿ ನಡೆಯುತ್ತಿದ್ದವು. ವಿಷಯಾಧಾರಿತ ಚರ್ಚೆಗಳು ನಡೆಯುತ್ತಿದ್ದವು. ಆದರೀಗ ಶಾಸನ ಸಭೆಯೆಂದರೆ ಅವರನ್ನು ಇವರು ಬಯ್ಯೋದು, ಇವರನ್ನು ಅವರು ಬಯ್ಯೋದು ಅಷ್ಟೇ ಆಗಿದೆ. ಈ ಹಿಂದೆ ಸಭಾಪತಿಗಳ ಕುರ್ಚಿಗೆ ಗೌರವ ಸಿಗುತ್ತಿತ್ತು. ಆದರೀಗ ಪರಿಸ್ಥಿತಿಯೇ ಬದಲಾಗಿ ಹೋಗಿದೆ. ಅಧಿವೇಶನ ಅರ್ಥ ಕಳೆದುಕೊಳ್ಳುತ್ತಿದೆ

● **ಬಸವರಾಜ್ ಹೊರಟ್ಟಿ** ವಿಧಾನ ಪರಿಷತ್ ಸಭಾಪತಿ